doc-545
T.P-2

Reg No B G 155 14 — 9 —72

In The State First Golden Jubilee Celebrated Paper 'Satyavadi' daily, Mysore 4

56th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ ಸ್ವತಂತ್ರ ಮಹೋತ್ಸವ ಪೆರಮೇರಿಸಿದ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೆದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನೌಕರಿ ಒದಗಿಸಲು ಐವತ್ತು ಕೋಟಿ ರೂ. ಯೋಜನೆ

ಒಲಂಪಿಕ್ಸ್‌ನಲ್ಲಿ

ಮ್ಯೂನಿಚ್— ಅಪರಿಮಿತ ಖರ್ಚಿನ ಒಲಂಪಿಕ್ ಕ್ರೀಡೆಗಳು, ರಾಜಕೀಯ ಶಕ್ತಿಗಳ, ಭಯೋತ್ಪಾತಕ ಬಂದೂಕಧಾರಿಗಳಿಂದ ಒಡೆದು ಹರಿದುಹೋಗಿದ್ದರೂ, ಮಂಗಳವಾರ ಹಾಗೂ ಹಿಗ್ಗೂ ನುಗ್ಗಿಯಿತು – ಪರಿಸಮಾಪ್ತಿ ಸಮಾರಂಭವು ನೃತ್ಯ ಸಂಗೀತ ಮುಂತಾದ ಆನಂದಗಳಿಂದ ಕೂಡಿರದೆ, ವಾಗ್ಯುದ್ಧದಿಂದ ಮುಕ್ತಾಯಗೊಂಡಿತು.

★★

ರಷ್ಯಾ 45 ಭಂಗಾರ, 25 ಬೆಳ್ಳಿ, 22 ಕಂಚಿನ ಮೆಡಲುಗಳನ್ನು ಗಳಿಸಿತು; ಅಮೇರಿಕಾ 33 ಭಂಗಾರ, 30 ಬೆಳ್ಳಿ, 29 ಕಂಚಿನ ಮೆಡಲುಗಳನ್ನು ಪಡೆಯಿತು: ಇತರ ದೇಶಗಳಿಗೆ ವಿವಿಧ ರೀತಿಯಲ್ಲಿ ಸಿಕ್ಕಿತು; ಭಾರತಕ್ಕೆ ಚಿನ್ನ ಬೆಳ್ಳಿ ದೊಡಲು ಗಳಿಲ್ಲದೆ, ಕೇವಲ ಒಂದು ಕಂಚಿನ ಮೆಡಲು ದೊರೆಯಿತು.

○○

ಒಲಂಪಿಕ್ ಗ್ರಾಮದಲ್ಲಿ ಪತ್ರಿಕಾ ಕೇಂದ್ರದಿಂದ ಟೆಲಿವಿಜ್ಞ ಸೆಟ್‌ಗಳು, ಟೈಪು ರೈಟರುಗಳು, ಲ್ಯಾಂಪುಗಳು, ಕೇಬಲ್‌ಗಳು, ಸಾಗಿಸಿಕೊಂಡು ಹೋಗಬಹುದಾದ ಇನ್ನೂ ಅನೇಕ ಪದಾರ್ಥಗಳನ್ನು ಕಳ್ಳರು ಕದ್ದುಕೊಂಡು ಹೋದರು; ನಷ್ಟ 20000 ದಷ್ಟಾಗಿದೆಯೆಂದು ಅಂದಾಜುಮಾಡಲಾಗಿದೆ – ಹೊಸ ಮಾದರಿಯ 160 ಬೈಸಿಕಲ್‌ಗಳಲ್ಲಿ 145 ಕದ್ದು, 15 ಬಿಟ್ಟಿದ್ದಾರೆ – ರಕ್ಷಣಾ ಪೋಲೀಸರು ಒಬ್ಬನನ್ನು ಬಂಧಿಸಿದ್ದಾರೆ

★★

ಪಶ್ಚಿಮ ಜರ್ಮನಿಯ ಮ್ಯೂನಿಚ್‌ನಲ್ಲಿಯ ಒಲಂಪಿಕ್ ಕ್ರೀಡೆಗಳಲ್ಲಿ, ಅನೇಕಾನೇಕ ವೈದ್ಯಕೀಯ ಕೇಂದ್ರಗಳಿದ್ದು, 620 ಡಾಕ್ಟರು, 1721 ಪ್ರಥಮ ಚಿಕಿತ್ಸಾ ಕರ್ತರು ಹತ್ತಿರಹತ್ತಿರ ಹಾರಾಡುವ ಚಿಕ್ಕ ವಿಮಾನಗಳು; 100 ಕ್ಕೂ ಹೆಚ್ಚು ಆಂಬ್ಯುಲೆನ್ಸುಗಳು, ಒಂದೂವರೆ ಮಿಲಿಯ ಮಾರ್ಕ್ಸ್ ಹಣದ ಬೆಲೆಯಷ್ಟು ವೈದ್ಯಕೀಯ ಸರಬರಾಜುಗಳೂ ಇದ್ದು, 12000 ಕ್ರೀಡಾಪಟುಗಳು ಅಧಿಕಾರಿಗಳು ನೌಕರರು ಸಹಾಯಕರರು, 4000 ಪತ್ರಿಕೋದ್ಯೋಗಿಗಳು, 28000 ಒಲಂಪಿಕ್ ಅಧಿಕಾರಿಗಳು ನೌಕರರು, 2 ಮಿಲಿಯ ಪ್ರೇಕ್ಷಕರ ಉಪಯೋಗಕ್ಕೆ ಸಿದ್ಧವಿತ್ತು.

●

ಇನ್ನು ಪತ್ರಿಕೋದ್ಯೋಗಿಗಳ ವಿಷಯ ನೋಡಿ. 4000 ಪತ್ರಿಕೋದ್ಯೋಗಿಗಳು ಸುಖಭೋಗದ ವಾಸನೂಡುತ್ತಾ, ತಿನ್ನುವುದು, ಕುಡಿಯುವುದು, ಮಲಗುವು ಕಾರ್ಯನಿರತರಾಗಿರುವಂತಾಗಿದ್ದರು. ಅವರಿಗೆ ಅತಿ ಪ್ರಮುಖ ಗಣ್ಯರ ಅತಿಥ್ಯವೇ ಸಿಕ್ಕಿತ್ತು. ಅವರನ್ನು ಸ್ವಾಗತಿಸಿ ನೋಡಿಕೊಳ್ಳಲು 50 ಮಂದಿ ಪೂರ್ತಾ ಹೊತ್ತಿನ ಪ್ರೆಸ್ ಕಛೇರಿ ಕೆಲಸಗಾರರು, ಹಲವು ಪ್ರೆಸ್ ಕೇಂದ್ರಗಳ 40 ಮಂದಿ ಮುಖ್ಯಾಧಿಕಾರಿಗಳು, 180 ಅತಿಥೇಯ ಮಹಿಳೆಯರು, 14 ಮಂದಿ ಭಾಷಾಂತರನೂಡಿ ವಚನಿಸುವವರು. 1945 ಮಂದಿ ಕಾರಬಾರಿಗಳು, 172 ಮಂದಿ ಬಾಗಿಲಲ್ಲಿನ ಕಾವಲುಗಾರರೂ, 95 ಮಂದಿ ದೂತರು, 226 ಮಂದಿ ಕುದುರೆಸಾರೋಟ್ ಮತ್ತು ಕಾರ್ ಡ್ರೈವರುಗಳು. 75 ಮಂದಿ ಮೋಟಾರು ಸೈಕಲ್ ಹರಿಕಾರರು, 360 ಮಂದಿ ಫಲಿತಾಂಶ ತಿಳಿಸುವವರೂ, 430 ಮಂದಿ ಫಲಿತಾಂಶ ಮುದ್ರಣದಲ್ಲಿ ಸಹಾಯಕರು, 340 ಮಂದಿ ಅಡಿಗೆಯವರು, ಒಬ್ಬ ಆಡಿಗೆ ಏರ್ಪಾಡು ಯಜಮಾನನು ಇದ್ದರು

ಮನವಿ ಅರ್ಪಣೆ

ಮೈಸೂರಿನ ಹಿರಿಯ ನೀರಾವರಿ ಕಾರ್ಯಗಳಿಗೆ ಉದಾರ ನೆರವನ್ನು ನೀಡಬೇಕೆಂದು ಮೈಸೂರು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸರು ರಾಜ್ಯದ ಮನವಿ ಪತ್ರ ಅರ್ಪಿಸಿದರು.

★

ಪರಿಶೀಲನೆ

ಈ ತಿಂಗಳು 24 ರಂದು ಬೆಂಗಳೂರಿನಲ್ಲಿ ಸಮಾವೇಶವಾಗುವ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಇತರ ವಿಚಾರಗಳ ಜೊತೆಗೆ ಕೃಷ್ಣಾ ಮೇಲ್ದಂಡೆ ಮತ್ತಿತರ ಹಿರಿಯ ನೀರಾವರಿ ವಿಚಾರ ಕುರಿತು ಪರಿಶೀಲಿಸುವುದು.

★

ವಸಂತ ಮಹಲ್

ಮೈಸೂರು ವಸಂತ ಮಹಲ್‌ನ್ನು ವಶಪಡಿಸಿಕೊಂಡು ಅದರಲ್ಲಿ ಸಂಪೂರ್ಣ ಅಗಿರುವ ಮಾನಸಿಕ ಆಸ್ಪತ್ರೆ ಸ್ಥಾಪಿಸುವಂತೆ ಸರ್ಕಾರವನ್ನು ಒತ್ತಾಯ ಮಾಡುವುದಾಗಿ ಡಾ|| ಸುವರ್ಣ ಹೇಳಿದರು.

ಸಮ್ಮೇಳನ

ಭಾರತ ಮಾನಸಿಕ ಸಂಘದ 5 ನೇ ಪ್ರಾದೇಶಿಕ ಸಮ್ಮೇಳನ ಈ ತಿಂಗಳು 16 ಮತ್ತು 17 ರಂದು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಪ್ರಾಥಲಾಜಿಕಲ್ ಬ್ಲಾಕ್‌ನಲ್ಲಿ ನಡೆಯುತ್ತದೆ. ಅದರಲ್ಲಿ ಇನ್ನೂರು ಪ್ರತಿನಿಧಿಗಳು ಭಾಗವಹಿಸುವರು ಎಂದು ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಸುವರ್ಣ ತಿಳಿಸಿದರು.

ನ್ಯಾಯ ಬೆಲೆ ಅಂಗಡಿ

ರಾಯಚೂರು ಆಕ್ಸಿ ಗಿರಣಿ ಮಾಲೀಕರು ಮತ್ತು ವರ್ತಕರು ಊರಿನ ನಡುವೆ ಎರಡು ನ್ಯಾಯಬೆಲೆಅಂಗಡಿ ತೆರೆದು ಲಾಭ ನಷ್ಟವಿಲ್ಲದ ರೀತಿ ವ್ಯಾಪಾರ ಮಾಡುತ್ತಿರುವರು.

★

ರಜತೋತ್ಸವ

ಮೈಸೂರು ನಗರದ ವರ್ತಮಾನ್ ದೈನಿಕ ರಜತೋತ್ಸವವನ್ನು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾರವರು ಈ ತಿಂಗಳು 15 ರ ಸಂಜೆ 6 ಗಂಟೆಗೆ ಪುರಭವನದಲ್ಲಿ ಉದ್ಘಾಟಿಸುವರು. ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್ ಅಧ್ಯಕ್ಷತೆ ವಹಿಸುವರು. ಪುರಸಭೆ ಅಧ್ಯಕ್ಷರಾದ ಶ್ರೀ ಕೆ.ಎಸ್. ಸೋಮಸುಂದರಂ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು.

★

ಕಾಂಗ್ರೆಸ್‌ನ ನಿರ್ಧಾರ

ದೇಶದ ಅದ್ಯಂತ ಅವಶ್ಯಕ ಪದಾರ್ಥಗಳ ಪಡಿತರ ಜಾರಿಗೆ ತರಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿರುವ ದಾಗಿ ನವ ದೆಹಲಿ ವಾರ್ತೆ

●

ಯೋಜನೆ ತಯಾರಿಕೆ

72-73 ಮತ್ತು 73-74 ರಲ್ಲಿ ಇಂಜಿನಿಯರುಗಳು ಸೇರಿ ವಿದ್ಯಾವಂತ ನಿರುದ್ಯೋಗಿಗಳಿಗೆ 80 ಸಾವಿರ ಉದ್ಯೋಗಗಳನ್ನು ಕಲ್ಪಿಸುವ 50 ಕೋಟಿ ರೂ. ವೆಚ್ಚದ ಯೋಜನೆಯನ್ನು ವಿವಿಧ ಕೇಂದ್ರಗಳ ಸಚಿವಾಲಯ ತಯಾರಿಸಿದೆ.

ಆಗ್ರೋ ಕೇಂದ್ರದ ಉದ್ಘಾಟನೆ

ರಾಮನಗರ ತಾಲ್ಲೂಕಿನ ಬೈರಮಂಗಲ ಗ್ರಾಮದಲ್ಲಿ ಮೈಸೂರು ರಾಜ್ಯದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಕಾರ್ಯ ಚಟುವಟಿಕೆಯ ಅಂಗವಾಗಿ ಆಗ್ರೋ ಕೇಂದ್ರದ ಉದ್ಘಾಟನೆಯನ್ನು ವಿಧಾನ ಸಭೆ ಸದಸ್ಯ ಶ್ರೀ ಬಿ. ಪುಟ್ಟಸ್ವಾಮಯ್ಯನವರು ನೆರವೇರಿಸಿದರು. ಕಾರ್ಪೊರೇಷನ್ನಿನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಹೆಚ್ ಸಿ ಚಿಕ್ಕವೀರಯ್ಯನವರು ಸ್ವಾಗತ ಬಯಸಿದರು ರೀಜನಲ್ ಮ್ಯಾನೇಜರ್ ಶ್ರೀ ಮಾದು ಅವರು ವಂದನೆ ಸಲ್ಲಿಸಿದರು.

ಮಾರ್ಕೆಟಿಂಗ್ ಸಮಿತಿ ರಚನೆ

ಮೈಸೂರು ಸರ್ಕಾರ 21 ಸದಸ್ಯರ ಉನ್ನತಾಧಿಕಾರ ವ್ಯವಸಾಯ ಮಾರ್ಕೆಟಿಂಗ್ ಸಮಿತಿ ರಚಿಸಿದೆ.

ಅಬ್ದುಲ್ಲರ ಪಕ್ಷಕ್ಕೆ ಗೆಲುವು

ಕಾಶ್ಮೀರ ಕಣಿವೆಯ ಸೊಪರೆ, ಬಾರಮುಲ್ಲ ಹಾಗೂ ಅನಂತನಾಗ್‌ಗಳ ನಗರ ಭಾಗಗಳ ಪೌರಸಭೆಯ ಚುನಾವಣೆಯಲ್ಲಿ ಷೇಕ್ ಅಬ್ದುಲ್ಲರ ಗುಂಪಿನವರೇ ಒಂದೆರಡು ಸ್ಥಾನಗಳನ್ನು ಬಿಟ್ಟು ಎಲ್ಲವನ್ನು ಗೆಲಿಸಿದರು. ಎದುರು ಪಕ್ಷ ಜಮಾಯಿತ್ ಇ ಇಸ್ಲಾಂ ಪೂರ್ತಾ ಸೋತಿತು.

ಧಾರ್ ರವರ ಸೂಚನೆ

ಅನಾವೃಷ್ಟಿ ನಿರೋಧ ಯೋಜನೆಗಳನ್ನು ನೀರಾವರಿ ಯೋಜನೆಗಳೊಂದಿಗೆ ಸೇರಿಸಬೇಕೆಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರಿಗೆ ಯೋಜನಾ ಮಂತ್ರಿ ಶ್ರೀ ಧಾರ್ ಸಲಹೆ ಮಾಡಿರುವರು.

ವುಡ್‌ಲ್ಯಾಂಡ್ಸ್ 15-9-72ರಂದ ಅಮೋಘ 2ನೇ ವಾರ

ಫಿಲಂಯುಗ ಅರ್ಪಿಸುವ

ಆ ಂ ಖೊ ಆ ಂ ಖೊ ಮೆ

ಹಿಂದಿ ಈಸ್ಟ್‌ಮ್ಯಾನ್ ಕಲರ್

ಪಾತ್ರ : ರಾಖಿ, ರಾಖೇಶ್ ರೋಷನ್ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10-30 ಕ್ಕೆ ದೋ ಭಾಯ್

ಅ ಪೆ ರಾ 2 ನೇ ವಾರ

— ಅತ್ಯಮೋಘ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಬುಡ್ಡಾ ಮಿಲ್ ಗಯಾ

ನಟವರ್ಗ—ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ

ಓಂ ಪ್ರಕಾಶ್, ಲಲಿತಾ ಪವಾರ್

ಪ್ರತಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆ ನೆ - ಹು ಡು ಗ

SHAKTI SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore